ತಾರೀಖು 26ನೇ ಮಾರ್ಚಿ 1889.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ಸಕ್ರ 1889ನೇ ಇಸವಿ ಮೇ 15ನೇ ತಾರೀಖು ಲಾಗಾಯತು 1890ನೇ ಇಸವಿ ಮಾರ್ಚಿ ತಾರೀಖು 31ರ ವರಿಗೆ ಇದರ ಕೆಳಗೆ ನಮೂದಿಸಿರುವ ತಾಲ್ಲೂಕುಗಳಲ್ಲಿ ಸಂದಲ್ ಹಳೇ ಜಡಗಳನ್ನು ಕಿತ್ತು ತಯಾರಿಯಿಂದ ಬಾಜಾದಲ್ಲಿ ನಮೂದಿಸಿರುವ ಕೋಠಿಗಳಿಗೆ ಸಾಗಿಸಲು ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿವೆ.

2. ಪ್ರತಿ ದರಖಾಸ್ತುದಾರನೂ ತಾನು ಸಂದಲ್ ಹಳೇ ಜಡಗಳನ್ನು ಕಿತ್ತು ತಯಾರಿಯಿಂದ ಸಾಗಿಸಲು ಮೈಪ್ಪಿಕೊಳ್ಳುವ ಕಮ್ಮಿ ದರವನ್ನು ನಮೂದಿಸತಕ್ಕದ್ದು.

3. ಪ್ರತಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನೂ ತನ್ನ ಖರಾರಿನಂತೆ ನಡಿದುಕೊಳ್ಳುವದಕ್ಕಾಗಿ ಪ್ರತಿ ಬಂದು ತಾಲ್ಲೂಕಿಗೂ 200 ರೂಪಾಯಿಗಳಂತೆ ಗವರ್ಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಡತಕ್ಕದ್ದು. ಖರಾರಿನಂತೆ ನಡಿಯದೇ ತಪ್ಪಿದಲ್ಲಿ ಈ ಮೊಬಲಗು ಗವರ್ಮೆಂಟಿಗೆ ಕೇರಿಸಿಕೊಳ್ಳಲ್ಪಡುವದು.

4. ದರಖಾಸ್ತುಗಳು ಮೈಸೂರ್ ಫಾರೆಸ್ಟ್ ಸೂಪರ್ಟೆಂಡೆಂಟ್ ಸಾಹೇಬರವರಿಂದ 1889ನೇ ಇಸವಿ ಏಪ್ರೆಲ್ ತಾರೀಖು 25ರ ವರಿಗೆ ಅಂಗೀಕರಿಸಲ್ಪಡುವದು.

5. ಫಾರೆಸ್ಟ್ ಸೂಪರ್ಟೆಂಡೆಂಟ್ ಸಾಹೇಬರವರು ಕಮ್ಮಿ ದರವನ್ನುಳ್ಳ ದರಖಾಸ್ತನ್ನು ಅಂಗೀಕರಿಸುವದಕ್ಕಾಗಲಿ ಯಾ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸಿದ್ದಕ್ಕೆ ಕಾರಣವನ್ನು ಕೊಡುವದಕ್ಕಾಗಲಿ ಬದ್ಧರಾಗಿಲ್ಲವು.

| | | |
|---|---|---|
| ಹುಣಸೂರು ತಾಲ್ಲೂಕಿನಿಂದ | .. .. | ಹುಣಸೂರು ಕೋಠಿಗೆ. |
| ಹೆಗ್ಗಡದೇವನಕೋಟೆ ತಾಲ್ಲೂಕಿನಿಂದ | .. | ಡಿಟೋ |
| (ಹುಣಸೂರು ಯಲ್ಲಿಯ ಅಂತ್ಯದಿಂದ ಮೈಸೂರ ಮಾನಂತ್ವಾಡಿ ರೋಡ್ ವರವಿಗೆ.) | | |
| ಎಡತೊರೆ ತಾಲ್ಲೂಕಿನಿಂದ | .. .. | ಶ್ರೀರಂಗವಟ್ಟಣ ಕೋಠಿಗೆ. |

ಕಂಟ್ರಾಕ್ಟುದಾರನು ಲಿಖ್ತಕ್ಕೆ ತೆರಲ್ಪಟ್ಟ ತೇದಾದಿನ ಮೇಲೆ ಆರವಾನಿ ವಗೈರೆ ಧರ್ಶಿಗಾಗಿ ಕೇಕಡಾ 10 ಮೇರೆ ಹೆಚ್ಚು ತೂಕವನ್ನು ಕೊಡಲು ಬದ್ಧನಾಗಿರತಕ್ಕದ್ದು.

ಸಿ. ಇ. ಎಂ. ರಸ್ಸೆಲ್,
ಫಾರೆಸ್ಟ್ ಸೂಪರ್ಟೆಂಡೆಂಟ್.

---

## ಕೋಲಾರ ಡಿಸ್ಟ್ರಿಕ್ಟು.

ತಾರೀಖು 25ನೇ ಫಿಬ್ರವರಿ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ನಮೂದಾಗುವ ತಾಲ್ಲೂಕುಗಳಲ್ಲಿ ಕುರಂಗದ ಕಲ್ಲು ಜವಾಯಿಸತಕ್ಕ ಹಕ್ಕು 1889ನೇ ಇಸವಿ ಮಾರ್ಚಿ ತಾರೀಖು 30ರಲ್ಲು ಆಯಾಯ ತಾಲ್ಲೂಕು ಕಛೇರಿಯಲ್ಲಿ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ. ಹರಾಜ್ ಬಿವಿ 11 ಘಂಟೆಗೆ ಆರಂಭಿಸಲ್ಪಡುವದು.

ಬವರಿಂಗ್‌ಪೇಟೆ, ಕಿಲ್ಲಘಟ್ಟ, ಗೋಬಿದನೂರು.

2. ಅಮಲ್ದಾರ್ರು ಅಥವಾ (ರಸ್ತೇಕಾರ್ರು) ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು, ಮೈಸೂರು ದಿವಾನ್‌ಸಾಹೆಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

4. ಇಜಾರೆ 1890ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ಜಾರ್ಯಲಿರುವದು.

5. ಹರಾಜು ಕಾಲದಲ್ಲಿ ಸವಾಲ್‌ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್‌ಮಾಡುತ್ತಾರೋ ಅಥವಾ ಯೇಜಂಟ್‌ವಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು, ಯೇಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್‌ಮಾಡುತ್ತಾರೋ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆ ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

6. ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ ಹಾಜರ್ಮಾಡಬೇಕು. ಹರಾಜು ಮಂಜೂರಾದ ಸಂಗತಿ ಅಮಲ್ದಾರ್ರಿಂದ ತಿಳಿಸಲ್ಪಟ್ಟ ಲಾಗಾಯತು 7 ದಿವಸಗಳ ವಳಗಾಗಿ ಬಾಕಿ ಮೊಬಲಗನ್ನು ಮತ್ತು ಚಡ ಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆ ಮೇಲ್ಗೆ ಲೋಕಲ್‌ಸೆಸ್ ಸಹ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವದು ಡಿಪಾಜಿಟ್ ಹಾಜರ್ಮಾಡದೇ ಇದ್ದಾಗ್ಯೂ ಅಥವಾ ಬಾಕಿ ಮೊಬಲಗು ಪೂರತಿ ಮಾಡದೆ ಯಿದ್ದಾಗ್ಯೂ ಈ ಬಾಬು ಪುನಃ ಹರಾಜು ಮಾಡಲ್ಪಟ್ಟು ಅದರಿಂದ ಮೊಂಟಾಗುವ ನಷ್ಟಕ್ಕೆ ಮೊದಲ ಚಡಸವಾಲ್‌ದಾರನು ಗುರಿಮಾಡಲ್ಪಡುವನು.

7. ಇಜಾರದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿವಿನಹ ಆರಿ ಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿರತಕ್ಕ ಕಲ್ಲುಗಳು ಜವಾಯಿಸಿಕೊಳ್ಳುವದಕ್ಕೆ ಆಗಲಿ ಅಥವಾ ಇಜಾರ್‌ದಾರ್ ವಿನಹ ಇತರರಿಗೆ ಸೋರುವದಕ್ಕೆ ಆಗಲಿ ಹಿಡುವಳಿದಾರ್ರಿಗೆ ಅಧಿಕಾರ ವಿರುವದಿಲ್ಲ.